ಕೆಂದು ಅವರೇ ಕೊಡುತ್ತಾರೆ. ಅದಕ್ಕೆ ನಾವು ಒಪ್ಪಿ ಕೊಳ್ಳುತ್ತೇವೆ. ಬೇರೆ ವಿಷಯ ಅದರಲ್ಲಿ ಬರುವುದಿಲ್ಲ.

ಶ್ರೀ ಎ. ಮಸಿಯಪ್ಪ.—ಈ ಸ್ಕೀಮುಗಳೆಲ್ಲಾ ಮೈಸೂರು ಸರ್ಕಾರದಿಂದಲೇ ಕೇಳಲ್ಪಟ್ಟವೆಯೋ ಅಥವಾ ಕೇಂದ್ರದಿಂದ ಹೊರಿನಲ್ಪಟ್ಟವೆಯೋ ?

ಶ್ರೀ ಕೆ. ಹನುಮಂತಯ್ಯ.—ಕೆಲವನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಕೆಲವನ್ನು ನಾವು ಹೇಳಿದ ಮೇಲೆ ಕೊಟ್ಟಿದ್ದಾರೆ. ಇವು ಉಭಯತ್ರರೂ ಸಮಾಲೋಚನೆಮಾಡಿ ನಿರ್ಧರವಾದ ಸ್ಕೀಮುಗಳು.

ಶ್ರೀ ಜಿ. ಬನಪ್ಪ.—ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿರುವುದು ಬರೀ ಕೇಂದ್ರ ಸರ್ಕಾರದಿಂದ ಬಂದಿರುವ ಗ್ರಾಂಟೆ ಅಥವಾ ಅದರಲ್ಲಿ ಮೈಸೂರು ಸರ್ಕಾರದ ಹಣವೂ ಸೇರಿದೆಯೆ ?

ಶ್ರೀ ಕೆ. ಹನುಮಂತಯ್ಯ.—"Grant from the Government of India" ಎಂದು ಉತ್ತರದಲ್ಲೇ ಹೇಳಿದೆ.

ಶ್ರೀ ಜಿ. ಬನಪ್ಪ.—ಪ್ರತಿ ವರ್ಷ ಕೊಟ್ಟಿರುವ ಗ್ರಾಂಟನ್ನು ಪೂರ್ತಿಯಾಗಿ ಉಪಯೋಗಿಸಲಾಗಿದೆಯೆ ?

ಶ್ರೀ ಕೆ. ಹನುಮಂತಯ್ಯ.—ಉಪಯೋಗಿಸಿದೆ.

ಶ್ರೀ ಜಿ. ಬನಪ್ಪ.—ಜಿ. ಎಂ. ಎಫ್. ಸ್ಕೀಂಗೆ 14 ಮತ್ತು 15ನೆಯ ಪುಟದಲ್ಲಿ ಕೊಟ್ಟಿರುವ ಪರಿಶಿಷ್ಟದಂತೆ 1950-51ರಲ್ಲಿ 69·5+33.55=103·05 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ; 89·49+8·22=97·71 ಲಕ್ಷ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದೆ. ಹಾಗಾದರೆ ಸ್ವಲ್ಪ ಹಣ ಲ್ಯಾಪ್ಸ್ ಆಗಲಿಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಪಂಚೆವಾರ್ಷಿಕ ಯೋಜನೆಯು 5 ವರ್ಷಗಳು ನಡೆಯಬೇಕಾಗಿರುವುದರಿಂದ ಒಂದು ವರ್ಷ ಹೆಚ್ಚಾಗಿ ಖರ್ಚಾಗುತ್ತದೆ, ಒಂದು ವರ್ಷ ಕಡಮೆಯಾಗುತ್ತದೆ. ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಯೋಜನೆ ಪ್ರಕಾರ ಎಷ್ಟು ಹಣ ಖರ್ಚಾಗಬೇಕಾಗಿತ್ತೋ ಅಷ್ಟು ಆಯಿತೆ ?

ಅಧ್ಯಕ್ಷರು.—2·47 ಲಕ್ಷ ರೂಪಾಯಿಗಳೆಂದು ಎಷ್ಟೋ ಸಲ ಆ ಪ್ರಶ್ನೆಗೆ ಉತ್ತರ ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಇದುವರೆಗೆ ಪ್ರಾಜೆಕ್ಟ್ ಪ್ರಕಾರ ನಡೆದಿರುವ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿದೆ ?

Sri K. HANUMANTHAIYA.—I do not have the information at the tip of my fingers, Sir. These questions have been answered and discussed.

ಶ್ರೀ ಎಸ್. ಗೋಪಾಲಗೌಡ.—ಕಮ್ಯೂನಿಟಿ ಪ್ರಾಜೆಕ್ಟು ಎಷ್ಟು ಲಕ್ಷ ರೂಪಾಯಿಗಳ ಪ್ರಾಜೆಕ್ಟು ?

Sri K. HANUMANTHAIYA.—I think for three years it is 65 lakhs.

ಶ್ರೀ ಎಸ್. ಗೋಪಾಲಗೌಡ.—ಇದು ಪ್ರಾರಂಭವಾಗಿ ಎಷ್ಟು ವರ್ಷವಾಯಿತು ?

Mr. SPEAKER.—First October 1952; you know it. I do not know why you must spend time over such questions.

ಶ್ರೀ ಎಸ್. ಗೋಪಾಲಗೌಡ.—ನನ್ನ ಅಭಿಪ್ರಾಯ ವಿಷ್ಟೆ : ಈಗ ಇದರಲ್ಲಿ ತೃಪ್ತಿಕರವಾದ ಪ್ರಗತಿಯಾಗಿದೆಯೆ ಎಂಬುದು ನನ್ನ ಪ್ರಶ್ನೆ.

Mr. SPEAKER.—That was discussed, the Minister has explained the whole matter and you have read the statement of the Minister.

Raiyats' Rest House at Periyapatna.

Q.—914. **Sri S. M. MARIYAPPA** (Periyapatna).—

Will the Government be pleased to state :—

(*a*) the amount spent by the District Board to construct the "Raiyats' Rest House" at Periyapatna Town;

(*b*) the total amount of donations collected from the public;

(*c*) whether the building is left for the said purpose at present ?

A.—**Sri T. CHANNIAH** (Minister for Public Health and Local Self-Government).—

(*a*) Rs. 7,114.

(*b*) Nil.

(*c*) The building has been rented out to the Town Municipal Council, Periyapatna, to hold its office.

ಶ್ರೀ ಎಸ್. ಎಂ. ಮರಿಯಪ್ಪ.—(*b*) ಭಾಗದ ಪ್ರಶ್ನೆಗೆ "ಯಾವುದೂ ಇಲ್ಲ" ಎಂದು ಉತ್ತರ ಕೊಟ್ಟಿದೆ. ಮಹಮದ್ ಯಾಕೂಬ್ ನಾಹೇಬರು 6 ಸಾವಿರ ರೂಪಾಯಿಗಳ ಡೊನೇಷ್ನ್ ಕೊಟ್ಟಿಲ್ಲವೆ ?

*ಶ್ರೀ ಟಿ. ಚನ್ನಯ್ಯ.—ಇಲ್ಲವೆಂದು ಹೇಳಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಈ ಕಟ್ಟಡವನ್ನು ವಹಿಸಿದವರು ಯಾರು ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರೇ ಇದನ್ನು ಕಟ್ಟಿಸಿದ್ದು; ಅವರೇ ಇದರ ವ್ಯೆವಾಟು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಅರ್ಧ ಕೆಲಸ ಮಾಡಿ ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸಿದೆಯಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಸ್. ಎಂ. ಮರಿಯಪ್ಪ.—ಈ ಕಟ್ಟಡಕ್ಕೆ 'ರೈತರ ವಿಶ್ರಾಂತಿ ನಿಲಯ' ಎಂದು ಹೆಸರು ಬರಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—'ರೈತರ ವಿಶ್ರಾಂತಿ ನಿಲಯ' ಎಂದು ಕರೆಯುತ್ತಿಲ್ಲ, ಬರೀ 'ವಿಶ್ರಾಂತಿ ನಿಲಯ' ಎಂಬ ಹೆಸರಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಇದಕ್ಕೆ ಯಾರೂ ಧರ್ಮ ಸಹಾಯ ಮಾಡಿಲ್ಲವೆಂದು ವರದಿ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನನಗೆ ಬಂದಿರುವ ವರದಿ ಪ್ರಕಾರ ದಿಸ್ಟ್ರಿಕ್ಟ್ ಬೋರ್ಡಿನವರು ಇದನ್ನು ಕಟ್ಟಿಸಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ತಾವು ಕೊಟ್ಟಿರುವ ಉತ್ತರ ಸರಿಯಾಗಿಲ್ಲದಿರುವುದರಿಂದ ಇದನ್ನು ವಿಚಾರ ಮಾಡುತ್ತೀರಾ ?

Sri T. CHANNIAH.—I will examine.

ಶ್ರೀ ಎಸ್. ಎಂ. ಮರಿಯಪ್ಪ.—ರೈತರಿಗೆ ಅಲ್ಲಿ ಧತ್ರವಗೈರೆ ಯಾವುದೂ ಇಲ್ಲದಿರುವುದರಿಂದ ಅವರಿಗಾಗಿಯೇ ಈ ಕಟ್ಟಡ ಕಟ್ಟಿರುವುದರಿಂದ ಅವರ ಉಪಯೋಗಕ್ಕಾಗಿ ಇದನ್ನು ಮಾಸಲಾಗಿಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಇದನ್ನು ಕಟ್ಟಿರುವ ಉದ್ದೇಶ ಪ್ರಯಾಣಿಕರಿಗಾಗಿ; ರೈತರಿಗೆಂದು ಕಟ್ಟಿಲ್ಲ. ಆವಶ್ಯಕತೆಯಿದ್ದರೆ ರೈತರೂ ಹೋಗಿ ಅಲ್ಲಿ ವಿಶ್ರಾಂತಿ ಪಡೆಯಬಹುದು.

Sri M. LINGANNA.—What is the total subscription from the raiyats for the construction of this apart from the amount that has been received by the District Board ?

Sri T. CHANNIAH.—My information is that only the District Board has spent Rs. 7,114; about the subscription from the public I have no information.

Sri M. LINGANNA.—In view of the fact that the amount for the Raiyats' Rest House was subscribed by others also, will it not be right on the part of the Government to restore this once again to the raiyats ?

Sri T. CHANNIAH.—The building was named as Rest House; it was not named Raiyats' Rest House.

Sri M. LINGANNA.—In view of the fact that there are no other rest houses for travellers, would it not be justifiable on the part of the Government to restore it to the travellers ?

Sri T. CHANNIAH.—Since there is no travellers bungalow, perhaps it is meant only for travellers. Anyway, we will examine that point.

Sri D. DEVARAJA URS.—Is it not a fact, Sir, before the District Board contributed the amount for the building, there was already a building ?

Sri T. CHANNIAH.—Notice.

Sri D. DEVARAJA URS.—Is it not a fact, Sir, during Sri K. S. Malle Gowda's time, who was then the Amildar of Pariyapatna, a donation was raised from the public ?

Sri T. CHANNIAH.—I have already answered that according to the reports I have got, there was no such donations from the public.

Sri D. DEVARAJA URS.—With the public donation do you think you can get a building of the type which is one in existence there for Rs. 7,000 and odd rupees ?

Mr. SPEAKER.—How can the Minister answer that ?

Sri D. DEVARAJA URS.—Will the Government get a proper report and make enquiries with regard to this building and the donations from public ?

Sri T. CHANNIAH.—Yes, that will be done.

Rates for Power Supply to certain Industries.

Q.—688. **Sri K. LAKKAPPA** (Chennarayapatna).—

Will the Government be pleased to state :—

(*a*) what is the rate charged for the supply of power to—

(i) Kolar Gold Fields Mines,
(ii) Binny Mills, Bangalore,
(iii) Imperial Tobacco Factory, Bangalore,
(iv) Government Factories at Bangalore,
(v) Private Factories, Bangalore.

(*b*) whether there was any revision of rates at any period for these industries, if so, when;

(*c*) what is the present rate charged for the said industries ?

A.—**Dr. R. NAGAN GOWDA** (Minister for Agriculture).—

(*a*)—

The following are the rates charged for power supply to—

(i)	Kolar Gold Fields Mines :	0·49 of an anna per unit *plus* 10 per cent tax.
(ii)	Binny Mills, Bangalore :	0·65 and 0·45 of an anna for Day and Night loads respectively with 10 per cent tax.
(iii)	Imperial Tobacco Factory, Bangalore.	Do
(iv)	Government Factories at Bangalore.	The rates charged are common to both as per schedule of rates noted below :
(v)	Private Factories.	